**JANUARY 5,2025**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವವರು: ವಿವೇಕಾದಿತ್ಯ ಕನಿಯಾಲ**

<><><>

**ಜನೆವರಿ 26 ರಂದು, ನವದೆಹಲಿಯಲ್ಲಿ** ನಡೆಯುವ ಗಣರಾಜ್ಯೋತ್ಸವದಲ್ಲಿ ಗಾಯಕಿಯಾಗಿ ಕೋಲಾರದ ಕೆ.ಎಂ ಶ್ರುತಿ ಅವರು ಆಯ್ಕೆಯಾಗಿದ್ದಾರೆ. ಕರ್ನಾಟಕ–ಗೋವಾ ಎನ್.ಸಿ.ಸಿ ನಿರ್ದೇಶನಾಲಯ ಪ್ರತಿನಿಧಿಯಾಗಿ ರಾಷ್ಟ್ರ ರಾಜಧಾನಿ ನವದೆಹಲಿ ತಲುಪಿರುವ ಅವರು, ಪ್ರಸ್ತುತ ತರಬೇತಿಯಲ್ಲಿ ತೊಡಗಿಕೊಂಡಿದ್ದಾರೆ. ಬೆಂಗಳೂರು ನಾಗರಬಾವಿಯ ಡಾಕ್ಟರ್ ಬಿ.ಆರ್ ಅಂಬೇಡ್ಕರ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನಲ್ಲಿ, ಕಂಪ್ಯೂಟರ್ ಸೈನ್ಸ್ ವ್ಯಾಸಂಗ ಮಾಡುತ್ತಿರುವ ಅವರು, ಪ್ರದೇಶ ಸಮಾಚಾರದೊಂದಿಗೆ ತಮ್ಮ ಸಂತಸ ಹಾಗೂ ಗಣರಾಜ್ಯೋತ್ಸವ ತಯಾರಿಯ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ.

**ಬೈಟ್: ಕೆ.ಎಂ ಶ್ರುತಿ 35 ಸೆಕೆಂದುಗಳು**

<><><>

**ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ** ಆಯೋಜಿತವಾಗಿರುವ ಎರಡು ದಿನಗಳ ವರ್ಣಚಿತ್ರ ಕಲಾಕೃತಿಗಳ ಪ್ರದರ್ಶನ ಹಾಗೂ ಮಾರಾಟ ಮೇಳ–ಚಿತ್ರಸಂತೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಿದರು. ಚಿತ್ರ ಸಂತೆಯಲ್ಲಿ ದೇಶದ 22 ರಾಜ್ಯಗಳ 1500 ಜನ ಕಲಾವಿದರು ಭಾಗವಹಿಸುತ್ತಿದ್ದಾರೆ. ಚಿತ್ರಸಂತೆಯ ಸಲುವಾಗಿ ನಗರದ ಕೆಂಪೇಗೌಡ ಬಸ್ ನಿಲ್ದಾಣ ಹಾಗೂ ಮಂತ್ರಿ ಮಾಲ್ ಮೆಟ್ರೋ ನಿಲ್ದಾಣದಿಂದ ವಿಧಾನಸೌಧದ ವರೆಗೆ ಪ್ರತಿ ಹತ್ತು ನಿಮಿಷ ಗಳಿಗೊಮ್ಮೆ, ವಿಶೇಷ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ತಿಳಿಸಿದೆ.

<><><>

**ರಂಗಾಯಣವು ನಾಟಕಗಳ ಆಯೋಜನೆ** ಮೂಲಕ ಮನರಂಜನೆಯೊಂದಿಗೆ, ಜೀವನ ಮೌಲ್ಯಗಳ ಬಗ್ಗೆ ಅರಿವು ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದು ಧಾರವಾಡ ಅಪರ ಜಿಲ್ಲಾಧಿಕಾರಿ ಸಿ.ಡಿ ಗೀತಾ ಅವರು ಹೇಳಿದರು. ಧಾರವಾಡ ರಂಗಾಯಣದ ವತಿಯಿಂದ, ಪಂಡಿತ ಬಸವರಾಜ ರಾಜಗುರು ಬಯಲು ರಂಗಮಂದಿರದಲ್ಲಿ, ವಿವಿಧ ರಂಗ ತಂಡಗಳ ಸಹಯೋಗದಲ್ಲಿ ಆಯೋಜಿತ ನಾಟಕ ತರಬೇತಿ ಕಾರ್ಯಾಗಾರ ಹಾಗೂ "ರಂಗಾಯಣ ನಾಟಕೋತ್ಸವ"ವನ್ನು ಉದ್ಘಾಟಿಸಿ, ಅವರು ಮಾತನಾಡಿದರು. ಹುಬ್ಬಳ್ಳಿ ಜನಪದ ಕಲಾ ಬಳಗದ ವತಿಯಿಂದ 'ಅಂಗುಲಿಮಾಲ' ದೊಡ್ಡಾಟ ಪ್ರದರ್ಶನ ವಾಯಿತು. 7 ನೇ ತಾರಿಖೀನವರೆಗೆ ಪ್ರತಿದಿನ ಸಂಜೆ 6 ಗಂಟೆಯಿಂದ ನಾಟಕ ಪ್ರದರ್ಶನವಿರಲಿದ್ದು, ಇಂದು ಹುಬ್ಬಳ್ಳಿಯ ಕನ್ನಡ ಕಲಾ ಸೇವಾ ತಂಡ ಪ್ರಸ್ತುತಪಡಿಸುವ 'ಹೆತ್ತವಳ ಹಾಲು ವಿಷವಾಯಿತು' ನಾಟಕ ಪ್ರದರ್ಶನಗೊಳ್ಳಲಿದೆ.

<><><>

**ರಾಜ್ಯ ಆಹಾರ ಆಯೋಗದ ಅಧ್ಯಕ್ಷರಾದ,** ಡಾಕ್ಟರ್ ಹೆಚ್. ಕೃ ್ಣ ನೇತೃತ್ವದ ತಂಡ, ಬೇಲೂರು ತಾಲೂಕಿನ ವಿವಿಧ ನ್ಯಾಯ ಬೆಲೆ ಅಂಗಡಿಗಳಿಗೆ, ಸಗಟು ಗೋದಾಮುಗಳಿಗೆ, ಬಾಲಕಿಯರ ವಸತಿ ನಿಲಯ, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಹೋಟೆಲ್‌ಗಳು ಹಾಗೂ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ ಆಹಾರದ ಗುಣಮಟ್ಟ, ಸ್ವಚ್ಛತೆ ಕುರಿತು ಪರಿಶೀಲಿಸಿ, ಸಂಸ್ಥೆ ಹಾಗೂ ವಸತಿ ನಿಲಯದ ಅಧಿಕೃತರಿಗೆ ಸಲಹೆ ಸೂಚನೆಗಳನ್ನು ನೀಡಿತು.

<><><>

**ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ** 'ಯುವನಿಧಿ' ಯೋಜನೆಯಲ್ಲಿ, 2022–23 ಹಾಗೂ 2023–24 ನೇ ಸಾಲಿನಲ್ಲಿ ಪದವಿ, ಸ್ನಾತಕೋತ್ತರ ಪದವಿ ಹಾಗೂ ಡಿಪ್ಲೋಮಾ ತೇರ್ಗಡೆಯಾಗಿ, ಉದ್ಯೋಗ ಸಿಗದ ಅರ್ಹ ಅಭ್ಯರ್ಥಿಗಳಿಗೆ ಸೇವಾ ಸಿಂಧು ಪೋರ್ಟಲ್, WWW. SEVA SINDHU GS . KARNATAKA. GOV. IN ನಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು, ಜನವರಿ 6 ರಿಂದ 20 ರ ವರೆಗೆ ವಿಶೇ ' ನೋಂದಣಿ ಅಭಿಯಾನ ವನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯ ತಿಳಿಸಿದ್ದಾರೆ. ಅರ್ಹ ಫಲಾನುಭವಿ ಪದವಿಧರರಿಗೆ ಪ್ರತಿ ತಿಂಗಳು 3 ಸಾವಿರ ರೂಪಾಯಿ ಹಾಗೂ ಡಿಪ್ಲೋಮಾ ತೇರ್ಗಡೆಯಾದವರಿಗೆ 1500 ರೂಪಾಯಿಗಳನ್ನು ನಿರುದ್ಯೋಗ ಭತ್ಯೆಯಾಗಿ ನೀಡಲಾಗುತ್ತದೆ.

<><><>

**ಹಾಸನ ಸಂಸದ, ಶ್ರೇಯಸ್ ಎಂ. ಪಟೇಲ್** ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯಿತಿ, ಹೊಯ್ಸಳ ಸಭಾಂಗಣದಲ್ಲಿ 16 ನೇ ತಾರೀಖಿನಂದು, ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ–ದಿಶಾ ಸಭೆಯನ್ನು ಆಯೋಜಿಸಿದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ತಿಳಿಸಿದ್ದಾರೆ.

<><><>

**ಮೈಸೂರಿನ ಕರ್ನಾಟಕ ಕಲಾ ಮಂದಿರದಲ್ಲಿ,** ಇದೇ 14 ರಿಂದ ಆರು ದಿನಗಳ ರಾಷ್ಟ್ರೀಯ ಬಹುರೂಪಿ ನಾಟಕೋತ್ಸವ ಆಯೋಜಿತವಾಗಿದೆ ಎಂದು, ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು ತಿಳಿಸಿದ್ದಾರೆ.

<><><>

**ಯಾದಗಿರಿ ಜಿಲ್ಲೆಯಲ್ಲಿ,** ಈ ತಿಂಗಳ 31ರ ವರೆಗೆ, ಪಡಿತರ ಚೀಟಿ ತಿದ್ದುಪಡಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ಆಹಾರ ಇಲಾಖೆ ಉಪ ನಿರ್ದೇಶಕ ಅನಿಲಕುಮಾರ ಢವಳಗಿ ತಿಳಿಸಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..**

<><><>